## ರೈತರ ಸಾಲ ಮನ್ನಾ ಮಾಡಿದ ಬಗ್ಗೆ

494(909). ಶ್ರೀ ಎಂ. ನಾರಾಯಣಸ್ವಾಮಿ (ಬೇತಮಂಗಲ):- ಮಾನ್ಯ ಸಹಕಾರ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯ ಸರ್ಕಾರವು ಎಷ್ಟು ಜನ ರೈತರಿಗೆ 10,000 ರೂಗಳ ಸಾಲ ಮನ್ನಾ ಮಾಡಿದೆ?

ಆ) ಇದರಲ್ಲಿ ಕೇಂದ್ರ ಸರ್ಕಾರದ ಪಾಲೆಷ್ಟು? ರಾಜ್ಯ ಸರ್ಕಾರದ ಪಾಲೆಷ್ಟು?

ಇ) ರೈತರ ಸಾಲ ಮನ್ನಾ ಮಾಡಿದ ನಿಗಧಿತ ಅವಧಿ ಮುಗಿದಿದೆಯೇ? ಮುಗಿದ್ದಿದರೆ ಮುಂದೆ ವಿಸ್ತರಿಸುವ ಯೋಜನೆ ಸರ್ಕಾರಕ್ಕಿದೆಯೇ?

ಶ್ರೀ ಎಸ್. ಆರ್. ಮೋರೆ (ಸಹಕಾರ ರಾಜ್ಯ ಸಚಿವರು):-

ಅ) 479102

ಆ) ಕೇಂದ್ರ ಶೇಕಡಾ 50, ಹಾಗೂ ರಾಜ್ಯ ಶೇಕಡಾ 50.

ಇ) ಮುಗಿದಿದೆ, ಮುಂದುವರಿಸುವ ಯೋಜನೆ ಇಲ್ಲ.

## ರಾಜ್ಯದಲ್ಲಿ ಪಡಿತರ ಹಸಿರು ಕಾರ್ಡುಗಳ ಬಣ್ಣ ಬದಲಾಯಿಸುವ ಬಗ್ಗೆ

495(910.) ಶ್ರೀ ಎಂ. ನಾರಾಯಣಸ್ವಾಮಿ (ಬೇತಮಂಗಲ):- ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ;

ಅ) ರಾಜ್ಯದಲ್ಲಿ ಒಟ್ಟು ಪಡಿತರ ಹಸಿರು ಕಾರ್ಡುಗಳ ಸಂಖ್ಯೆ ಎಷ್ಟು?

ಆ) ಈ ಹಸಿರು ಕಾರ್ಡುಗಳ ಬಣ್ಣವನ್ನು ಸರ್ಕಾರ ಬದಲಾಯಿಸುವುದೇ?

ಇ) ಹಾಗಿದ್ದಲ್ಲಿ ಇದಕ್ಕೆ ತಗಲುವ ವೆಚ್ಚವೆಷ್ಟು ಹಾಗೂ ಇದರ ಉದ್ದೇಶವೇನು?

ಶ್ರೀ ಬಿ.ಎನ್. ನರಸಿಂಹಮೂರ್ತಿ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು):-

ಅ) 31,14,608

ಆ) ಹೌದು.

ಇ) ಈ ಕಾರ್ಯಕ್ರಮಕ್ಕೆ ತಗಲುವ ವೆಚ್ಚ 1.75 ಕೋಟಿ ರೂಪಾಯಿಗಳು.

ಹಸಿರು ಪಡಿತರ ಚೀಟಿಗಳನ್ನು ನೀಡಿ ಈಗಾಲೇ 6-7 ವರ್ಷಗಳಾಗಿದ್ದು ಅವುಗಳ ಪುಟಗಳೆಲ್ಲಾ ಮುಗಿದು ಹೋಗಿರುತ್ತವೆ. ಈಗ ಬೇರೆ ಪಡಿತರ ಚೀಟಿಗಳನ್ನು ಕೊಡಲೇಬೇಕಾಗಿದ್ದರಿಂದ ಹೊಸದಾಗಿ ಸಮೀಕ್ಷೆ ಕಾರ್ಯ ಕೈಗೊಂಡಿದೆ. ಇದರಿಂದ ನಕಲಿ ಪಡಿತರ ಚೀಟಿಗಳನ್ನು ಗುರುತಿಸಲು ಸಹಾಯವಾಗುತ್ತದೆ. ಮತ್ತು ಈಗ ನಿಗಧಿಪಡಿಸಿರುವ ಆರ್ಥಿಕ ಆದಾಯ ರೂ 3,500 ರಿಂದ ರೂ 6,400ಕ್ಕೆ ಹೆಚ್ಚಿಸಿರುವುದರಿಂದಲೂ ಬದಲಾವಣೆ ಮಾಡುವ ಅವಶ್ಯಕತೆ ಇದೆ.

## ನಂದಿತ್ತಿಗರದಲ್ಲಿ 33 ಕೆ.ವಿ. ಸ್ಟೇಷನ್ ನಿರ್ಮಾಣ

496 (935.) ಶ್ರೀ ಎಂ. ಸಿ. ಪಟ್ಟಣಶೆಟ್ಟಿ (ಬಾದಾಮಿ):- ಮಾನ್ಯ ಇಂಧನ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ;

ಬ) ಬಾದಾಮಿ ತಾಲ್ಲೂಕಿನ ನಂದಿಕೇಶ್ವರದಲ್ಲಿ 33 ಕೆ.ವಿ. ಸ್ಟೇಷನ್ ನಿರ್ಮಾಣ ಮಾಡುವ ಯೋಜನೆ ಸರ್ಕಾರದ ಮುಂದಿದೆಯೇ?